ಶ್ರೀ ಕೆ. ಹೆಚ್. ಹನುಮೇಗೌಡ.—ಅ ಒಂದು ನಿಲುವಳಿ ಸೂಚನೆಗೆ ಅವಕಾಶವನ್ನು ತಾವು ಮಾಡಿ ಕೊಡಬೇಕು.

STRIKE BY THE PRIVATE SCHOOL TEACHERS AND COLLEGES

ಶ್ರೀ ಟಿ. ಆರ್. ಶಾಮಣ್ಣ.—166ನೇ ಸೆಕ್ಷನ್ ಪ್ರಕಾರ, ಕಾಲೇಜು ಉಪಾಧ್ಯಾಯರ ವರ್ಗ ಒಂದು ದೊಡ್ಡ ಅಂದೋಳನ ಪ್ರಾರಂಭಮಾಡಿರುವುದರಿಂದ, ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೇನೆ. ಅದನ್ನು ಅದಷ್ಟು ಜಾಗ್ರತೆಯಾಗಿ ತೆಗೆದುಕೂಳ್ಳಬೇಕು.

ಅಧ್ಯಕ್ಷರು.—ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಬಂದಿದೆ, ತಾವೂ ಸಹ ಇದರ ಬಗ್ಗೆ ಈಗಾಗಲೇ ನೋಟಿಸ್ ಕಳುಹಿಸಿಕೊಟ್ಟಿದ್ದೀರಿ. ಆ ವಿಷಯ ನನಗೆ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಸಹ ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಮೋಷನ್ ಕಳುಹಿಸಿ ಕೊಟ್ಟಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಯಾವಾಗ ಬರುತ್ತದೋ ಏನೋ ಗೊತ್ತಾಗಲಿಲ್ಲ. ಏಕೆಂದರೆ, ಈಗಾಗಲೇ ಉಪವಾಸ ವ್ರತವನ್ನು ಖಾಸಗೀ ಕಾಲೇಜು ಉಪಾಧ್ಯಾಯರುಗಳು, ಯೂನಿವರ್ಸಿಟಿ ಉಪಾಧ್ಯಾಯರುಗಳು ಆಚರಿಸುತ್ತಿದ್ದಾರೆ. ನಿನ್ನೆಯಿಂದಲೇ ಅವರು ಮೆರವಣಿಗೆ ಹೋಗುವುದನ್ನು ಪ್ರಾರಂಭಿಸಿದ್ದಾರೆ. ಆದರೂ ಅವರ ಪ್ರಶ್ನೆ ಇನ್ನೂ ಇತ್ಯರ್ಥವಾಗಲಿಲ್ಲ. ಸರ್ಕಾರದ ಪರವಾಗಿ ಅವರನ್ನು ಏನಾದರೂ ಹೋಗಿ ಯಾರಾದರೂ ಕೇಳಿದ್ದಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಅದೆಲ್ಲವನ್ನೂ ವಿಚಾರಮಾಡಲಾಗಿದೆ. 58 ವರ್ಷಗಳೆಂಬುದನ್ನು ಮತ್ತೆ ರೆಸ್ಟೋರ್ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದರ ಬಗ್ಗೆ ಸ್ಪಷ್ಟ ವಿವರಣೆಯನ್ನು ಕೊಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಆ ವಿಚಾರ ಬಂದಾಗ್ಗೆ ಹೇಳೋಣ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ವಿಧಾನಸೌಧದ ಹೊರಗೆ ಹೋಗುವ ಹಾಗೆಯೇ ಇಲ್ಲ. ಏಕೆಂದರೆ ವಿಧಾನಸೌಧದ ಅನೇಕ ಮೂಲೆಗಳಲ್ಲಿ ಉಪವಾಸ ವ್ರತವನ್ನು ಆರಂಭಿಸುತ್ತಿದ್ದಾರೆ. ಒಂದು ಕಡೆ, ಆರೋಗ್ಯ ಇಲಾಖೆಯ ಕಾರ್ಯಕರ್ತರು, ಇನ್ನೊಂದು ಕಡೆ ಖಾಸಗೀ ಕಾಲೇಜಿನ ಉಪಾಧ್ಯಾಯರುಗಳು, ಮತ್ತೊಂದು ಕಡೆ ಯೂನಿವರ್ಸಿಟಿ ಉಪಾಧ್ಯಾಯರುಗಳು ಉಪವಾಸ ವ್ರತವನ್ನು ಕೈಗೊಂಡಿದ್ದಾರೆ. ಅವರನ್ನು ಅಲ್ಲಿಂದ ಎಬ್ಬಿಸುವುದಕ್ಕೆ ಅವರ ಸಮಸ್ಯೆಗಳನ್ನು ಏನಾದರೂ ತಿಳಿದುಕೊಂಡಿದ್ದೀರಾ, ಅವರ ಸಮಸ್ಯೆಗಳ ಪರಿಹಾರಕ್ಕೆ ಅವರಿಗೇನಾದರೂ ಸಮಾಧಾನವನ್ನು ಹೇಳಿದ್ದೀರಾ, ಅದರ ಬಗ್ಗೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ಎಂಬುದನ್ನು ದಯವಿಟ್ಟು ಈ ಸಭೆಯಲ್ಲಿ ಅಪ್ಪಣೆ ಕೊಡಿಸಿ.

ಶ್ರೀ ಕೋಣಂದೂರು ಲಿಂಗಪ್ಪ :—ನೀವು ಅಂದರೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವುದು ಬೇಡ, ನಮಗೆ ಇದು ಸಮಂಜಸವಾಗಿ ಕಾಣುವುದಿಲ್ಲ ಎಂದು ಕೇಳಿದರೆ, ತಾವು ಇದನ್ನು ಒಪ್ಪುತ್ತೀರಾ ?

2-00 P. M.

ಅಧ್ಯಕ್ಷರು :—ಮಾನ್ಯ ಸದಸ್ಯರು ನನಗೆ ಈ ಪ್ರಶ್ನೆಯನ್ನು ಹಾಕಬಹುದೇ?

ಶ್ರೀ ಕೋಣಂದೂರು ಲಿಂಗಪ್ಪ :—ನಾವು ತಮಗೆ ಪೂರ್ಣ ಅಧಿಕಾರವನ್ನು ಕೊಡುತ್ತೇವೆ ತಾವು ಆ ಪಕ್ಷದವರನ್ನು ಒಂದುಸಾರಿ ಸಂಪೂರ್ಣವಾಗಿ ಅಧಿಕಾರದಿಂದ ಡಿಸ್‌ಮಿಸ್‌ಮಾಡಿಬಿಡಿ....

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು) :—

ಮಾನ್ಯ ಅಧ್ಯಕ್ಷರೇ : ಈ ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡನೆ ಮಾಡುವುದಕ್ಕಾಗಿ ತಮ್ಮ ಅನುಮತಿಯನ್ನು ಬೇಡಿ ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ : ಆ ನಿರ್ಣಯ ಈ ರೀತಿಯಾಗಿದೆ :

MOTION UNDER RULE 146

Re :—*A*trocities on kannadigas and other linguistic minorities by the Shiv-Sena and others in Bombay, and other part of Maharashtra State. Also urging the Central Government and the Maharashtra Government to hold judicial enquiry in these events and to pay compensation to those who have suffered by the incident.